Inward No: 15255
7322
02 MAR 2023
ಬೆಂಗಳೂರು
ಕರ್ನಾಟಕ ರಾಜ್ಯ

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯಃ- ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ಪರಿಷ್ಕೃತ ಲಾಂಛನ ಮತ್ತು ಧ್ವಜಕ್ಕೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:- 1. ಮಹಾನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆ, ಬೆಂಗಳೂರುರವರ ಪತ್ರ ಸಂಖ್ಯೆ: ಆರ್.ಎಸ್./ಸಿಆರ್-40/2022, ದಿನಾಂಕ: 26-09-2022.

2. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 43 ಪಿಆರ್‌ಇ 2019, ದಿನಾಂಕ: 29-07-2019.

********

ಪ್ರಸ್ತಾವನೆ:

15255
1440
06/03/2023

ಓದಲಾದ (1) ರ ಪತ್ರದಲ್ಲಿ, ಪ್ರಸುತ ಕಾರಾಗೃಹ ಇಲಾಖೆಯು ಓದಲಾದ (2) ರ ಆದೇಶದನ್ವಯ "ಕಾರಾಗೃಹ ಮತ್ತು ಸುಧಾರಣಾ ಸೇವೆ" ಪದನಾಮದಲ್ಲಿ ಕಾರ್ಯನಿರ್ವಹಿಸುತ್ತಿದೆ. ಕಾರಾಗೃಹಗಳಲ್ಲಿರುವ ಬಂದಿಗಳ ಮನ: ಪರಿವರ್ತನೆ ಹಾಗೂ ಬಿಡುಗಡೆಯಾದ ನಂತರ ಪುನರುಜ್ಜೀವನ ಕಲ್ಪಿಸುವುದು ಇಲಾಖೆಯ ಪ್ರಮುಖ ಉದ್ದೇಶವಾಗಿರುತ್ತದೆ. ಈ ನಿಟ್ಟಿನಲ್ಲಿ ಬಂದಿಗಳ ಅಪರಾಧ ಮನಸ್ಥಿತಿ ಸುಧಾರಣೆ ಹಾಗೂ ಅವರ ಅಭ್ಯುದಯಕ್ಕಾಗಿ ಕಾರಾಗೃಹಗಳಲ್ಲಿ ವಿವಿಧ ಸುಧಾರಣಾ ಕಾರ್ಯಕ್ರಮಗಳಾದ ಶಿಕ್ಷಣ, ಯೋಗ, ಧ್ಯಾನ ಮತ್ತು ವೃತ್ತಿಪರ ಕೌಶಲ್ಯ ತರಬೇತಿ ನೀಡಲಾಗುತ್ತಿದ್ದು, ಕಾರಾಗೃಹದಲ್ಲಿರುವ ಬಂದಿಗಳ ಸುಧಾರಣೆ ಹಾಗೂ ಪುರ್ನವಸತಿಯು ಇಲಾಖೆಯ ಮುಖ್ಯ ಧ್ಯೇಯವಾಗಿರುತ್ತದೆ.

ಕಾರಾಗೃಹಗಳಲ್ಲಿ ಬಂದಿಗಳಿಗೆ ಉದ್ಯೋಗ ಕಲ್ಪಿಸುವುದರಿಂದ ಆರ್ಥಿಕವಾಗಿ ಸಬಲರಾಗಿ ಬಿಡುಗಡೆಯಾದ ನಂತರ ಸತ್ಪ್ರಜೆಗಳಾಗಿ ಸಮಾಜದ ಮುಖ್ಯವಾಹಿನಿಯಲ್ಲಿ ಜೀವಿಸಲು ಅಗತ್ಯವಿರುವ ಹಲವಾರು ಸುಧಾರಣಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ಕಾರಾಗೃಹಗಳಲ್ಲಿರುವ ಬಂದಿಗಳ ಭದ್ರತೆ ಹಾಗೂ ಮನ: ಪರಿವರ್ತನ ಕರ್ತವ್ಯದಲ್ಲಿ ತೊಡಗಿರುವ ಇಲಾಖೆಯ ವಿವಿಧ ಹಂತದ ಅಧಿಕಾರಿ ಮತ್ತು ಸಿಬ್ಬಂದಿಗಳ ಕಾರ್ಯಕ್ಷಮತೆ ಮತ್ತು ಮನೋಸ್ಥೈರ್ಯ ವೃದ್ಧಿಸಲು ಇಲಾಖೆಯ ಲಾಂಛನ ಮತ್ತು ಇಲಾಖಾ ಧ್ವಜ ಪ್ರೇರಣೆಯ ಸಂಕೇತವಾಗಿದ್ದು, ಇಲಾಖೆಯ ಹಿಂದಿನ ಹೆಸರನ್ನು ಬದಲಾಯಿಸಲಾಗಿರುತ್ತದೆ.

ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆಯೆಂದು ಬದಲಾವಣೆ ಮಾಡುವ ಮೊದಲು ಕಾರಾಗೃಹ ಇಲಾಖೆಯೆಂದು ಕಾರ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಇಲಾಖೆಯ ಲಾಂಛನವು (Logo) ಎರಡು ಬೀಗದ ಕೀಲಿಗಳ ಚಿನ್ಹೆಯನ್ನು ಹೊಂದಿತ್ತು. ಸದರಿ ಚಿನ್ಹೆಯಿಂದ ಬಂದಿಗಳನ್ನು ಬಂದಿಸಿಡುವ ಭಾವನೆ ಉಂಟು ಮಾಡುತ್ತಿದ್ದು, ಪ್ರಸ್ತುತ ಇಲಾಖೆಯು ಕೈಗೊಳ್ಳಲಾಗುತ್ತಿರುವ ಸುಧಾರಣಾ ಕ್ರಮಗಳಿಗೆ ಸೂಕ್ತವಾಗಿಲ್ಲದೇ ಇರುವುದರಿಂದ, ಇಲಾಖೆಯ ಈ ಹಿಂದಿನ ಲಾಂಛನ ಹಾಗೂ ಧ್ವಜವನ್ನು ಬದಲಾಯಿಸಲು ಉದ್ದೇಶಿಸಲಾಗಿದೆ.

ಈ ಹಿನ್ನಲೆಯಲ್ಲಿ, ಕಾರಾಗೃಹ ಇಲಾಖೆಯ ಹಿಂದಿನ ಲಾಂಛನ (Logo) ಮತ್ತು ಧ್ವಜವನ್ನು ಕಾರಾಗೃಹ ಮತ್ತು ಸುಧಾರಣ ಸೇವೆ, ಕರ್ನಾಟಕ ರಾಜ್ಯ ಪದನಾಮಕ್ಕೆ ಹೊಂದಾಣಿಕೆ ಆಗುವ ರೀತಿಯಲ್ಲಿ ಚಿನ್ಹೆಯನ್ನು ಬದಲಾಯಿಸಲಾಗಿದ್ದು, ಪರಿಸ್ಕೃತ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿರುವ ಇಲಾಖಾ ಲಾಂಛನ ಮತ್ತು ಇಲಾಖಾ ಧ್ವಜದ ಪ್ರತಿಯನ್ನು ಲಗತ್ತಿಸಿ ಪರಿಷ್ಕೃತ ಲಾಂಛನ ಮತ್ತು ಇಲಾಖಾ ಧ್ವಜ ಲಾಂಛನಕ್ಕೆ ಅನುಮೋದನೆ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2/3/2023

SP (Prisons) SP, Hq.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 202 ಪಿಆರ್‌ಇ 2022,**
**ಬೆಂಗಳೂರು, ದಿನಾಂಕ: 28-02-2023**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಮಹಾನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣ ಸೇವಾ ಇಲಾಖೆ, ಕರ್ನಾಟಕ ರಾಜ್ಯ ಎಂಬ ಪದನಾಮಕ್ಕೆ ಹೊಂದಾಣಿಕೆ ಆಗುವ ರೀತಿಯಲ್ಲಿ ಈ ಆದೇಶದೊಂದಿಗೆ ಲಗತ್ತಿಸಿರುವ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿರುವ ಇಲಾಖಾ ಲಾಂಛನ ಮತ್ತು ಇಲಾಖಾ ಧ್ವಜವನ್ನು ಕಾರಾಗೃಹ ಮತ್ತು ಸುಧಾರಣ ಸೇವಾ ಇಲಾಖೆಯಲ್ಲಿ ಬಳಸಲು ಅನುಮತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
28/2/2023
**(ಬಿ.ಎನ್ ದೇವರಾಜ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸೆರೆಮನೆ ಮತ್ತು ಸಿನಿಮಾ)

ಗೆ

1. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು (ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು)
2. ಮಹಾಲೇಖಪಾಲರು (ಜಿ&ಎಸ್‌ಎಸ್‌ಎ, ಇ&ಆರ್‌ಎಸ್‌ಎ), ಕರ್ನಾಟಕ ಬೆಂಗಳೂರು.
3. ಮಹಾನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆ, ಕರ್ನಾಟಕ ರಾಜ್ಯ, ಶೇಷಾದ್ರಿ ರಸ್ತೆ, ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಗೃಹ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ ಇವರ ಹಿರಿಯ ಆಪ್ತ ಕಾರ್ಯದರ್ಶಿ, ವಿಧಾನಸಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ(ಪಿಸಿಎಎಸ್), ಒಳಾಡಳಿತ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನಸಸೌಧ, ಬೆಂಗಳೂರು
5. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು.
6. ಸರ್ಕಾರದ ಉಪ ಕಾರ್ಯ ದರ್ಶಿ, ಒಳಾಡಳಿತ ಇಲಾಖೆ( ಅಪರಾಧಗಳು, ಸೆರೆಮನೆ ಮತ್ತು ಸಿನಿಮಾ) ಇವರ ಆಪ್ತ ಸಹಾಯಕರು, ವಿಧಾನಸಸೌಧ, ಬೆಂಗಳೂರು.
7. ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿ.

2023

PRISONS AND CORRECTIONAL SERVICES

KARNATAKA STATE

ಕಾರಾಗೃಹ ಮತ್ತು ಸುಧಾರಣಾ ಸೇವೆ

ಕರ್ನಾಟಕ ರಾಜ್ಯ

28/2/2023